

# ರಿಯಲಿಸ್ಟಿಕ್ ಪಾತ್ರಪ್ರೇಮಿ 'ಕೆರೆಬೇಟೆ' ಬಿಂದು

■ ಸುಮಲತಾ ಎನ್.

ಬಿಂದು ಶಿವರಾಂ ಬೆಂಗಳೂರಿನ ಹುಡುಗಿ, 'ಕೆರೆಬೇಟೆ' ಸಿನಿಮಾ ಮೂಲಕ ಚಂದನವನಕ್ಕೆ ಪರಿಚಯಗೊಳ್ಳುತ್ತಿರುವ ಬೆಡಗಿ. ವಾಸ್ತವಿಕ ನೆಲೆಗಟ್ಟಿನ ಸಿನಿಮಾಗಳಲ್ಲಿ ತಮ್ಮನ್ನು ಪ್ರಯೋಗಿಸಿಕೊಳ್ಳುವುದು ಅವರ ಹಂಬಲ. ತಮ್ಮ ಮೊದಲ ಸಿನಿಮಾ ಕೊಟ್ಟ ಅನುಭವಗಳನ್ನು, ಸಿನಿಮಾರಂಗದಲ್ಲಿನ ತಮ್ಮ ಕನಸುಗಳನ್ನು 'ಚಿತ್ರಸುಧಾ' ಜೊತೆ ಹಂಚಿಕೊಂಡಿದ್ದಾರೆ. ಅವರೊಂದಿಗಿನ ಮಾತುಕತೆ ಇಲ್ಲಿದೆ...

◆ 'ಕೆರೆಬೇಟೆ' ಸಿನಿಮಾದಲ್ಲಿ ನಿಮ್ಮ ಪಾತ್ರ ಏನು ಹೇಳಲು ಹೊರಟಿದೆ?

'ಕೆರೆಬೇಟೆ' ನನ್ನ ಚೊಚ್ಚಲ ಸಿನಿಮಾ. ತುಂಬಾ ಸರಳವಾದ, ಕಾಲೇಜಿಗೆ ಹೋಗುತ್ತಿರುವ ಮಲೆನಾಡಿನ ಹುಡುಗಿ ಪಾತ್ರ ನನ್ನದು. ನಾನು ಬೆಂಗಳೂರಿನವಳಾದರೂ ಮಲೆನಾಡಿನಲ್ಲಿ ಸ್ವಲ್ಪ ಸಮಯ ಇದ್ದು, ಅಲ್ಲಿನವರ ಭಾಷೆಯ ಶೈಲಿಯನ್ನು ಕಲಿತುಕೊಂಡು ನಟಿಸಿದ್ದೇನೆ. ನಟಿಸಿದ್ದೇನೆ ಅನ್ನುವುದಕ್ಕಿಂತ ಆ ಪಾತ್ರದಲ್ಲೇ ನಾನಿದ್ದೇನೆ. ಕಂಟೆಂಟ್ ಆಧರಿತ ಆಗಿರುವುದರೊಂದಿಗೆ ಕಮರ್ಷಿಯಲ್ ಅಂಶಗಳನ್ನೂ ಸಿನಿಮಾ ಒಳಗೊಂಡಿದೆ. ಹೆಸರಿಗೆ 'ಹೀರೊಯಿನ್' ಇರಬೇಕು ಎಂಬಂತೆ ಈ ಪಾತ್ರವನ್ನು ರೂಪಿಸಿಲ್ಲ, ಒಂದು ಗಟ್ಟಿ ಹಿನ್ನೆಲೆಯನ್ನು ಹಿಡಿದಿಟ್ಟುಕೊಂಡಿದೆ. ಅದೇ ನನ್ನನ್ನು ಸೆಳೆದ ಅಂಶ.

◆ ಇವೆಂಟ್ ಮ್ಯಾನೇಜ್‌ಮೆಂಟ್‌ನಲ್ಲಿರುವ ನೀವು, ನಟನಾ ಕ್ಷೇತ್ರಕ್ಕೆ ಕಾಲಿಟ್ಟಿದ್ದು ಹೇಗೆ?

ನಾನು ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದದ್ದು. ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ 2ನೇ ಪಿಯುಸಿ ಮಾಡಿದ್ದು. ಆಗ ಡ್ರಮಾಟಿಕ್ ಅಸೋಸಿಯೇಷನ್‌ನಲ್ಲಿದ್ದ ಕಾರಣ ನಾಟಕಗಳಲ್ಲಿ ಅಭಿನಯಿಸಿದ್ದೆ. ಪಾಶ್ಚಾತ್ಯ ನೃತ್ಯವನ್ನೂ ಕಲಿತಿದ್ದೆ. ಫ್ಯಾಷನ್ ವಾಕ್‌ಗಳನ್ನು ಮಾಡುತ್ತಿದ್ದೆ. ನಮ್ಮ ಕಾಲೇಜಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೆಚ್ಚು ಮಹತ್ವ ಕೊಡುತ್ತಿದ್ದರು. ನಾನೂ ಹೆಚ್ಚು ತೊಡಗಿಸಿಕೊಳ್ಳುತ್ತಿದ್ದೆ. ಇದು ನನಗೆ ಸಹಾಯ ಮಾಡಿತು. ನಾಟಕ ಮಾಡುತ್ತಾ, ನಟನೆಯೆಡೆಗೆ ಆಸಕ್ತಿ ಬೆಳೆಯಿತು. ಸಿನಿಮಾಗೆ ಪ್ರಯತ್ನ ಮಾಡೋಣ ಎಂದು 'ಕೆರೆಬೇಟೆ' ಸಿನಿಮಾಗೆ ಆಡಿಷನ್ ಕೊಟ್ಟೆ. ಅದಕ್ಕಾಗಲೇ ಒಬ್ಬರು ಆಯ್ಕೆಯಾಗಿದ್ದರು. ಕೊನೆಗೆ ನನ್ನ ಆಡಿಷನ್ ನಂತರ ಆ ಪಾತ್ರ ನನ್ನದಾಯಿತು. ಪಾತ್ರಕ್ಕೊಂದು ಋಣ ಇರಬೇಕು ಅನ್ನುತ್ತಾರಲ್ಲ, ಆ ರೀತಿ ನನಗೆ ಪಾತ್ರ ಸಿಕ್ಕಿತು.

◆ ಅಭಿನಯದಲ್ಲಿ ಆತ್ಮವಿಶ್ವಾಸ ಮೂಡಿದ್ದು ಹೇಗೆ?

ನನಗೆ ಕ್ಯಾಮೆರಾ ಎದುರಿಸಲು ಭಯವಿರಲಿಲ್ಲ. ಆದರೆ ನಟನೆಗೆ ಒಂದು ಗಟ್ಟಿ ಅಡಿಪಾಯ